DTE-ADMI0EST(10)/35/2024-JD-DEPT TECH EDUCATION

I/651090/2024

ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

TE-ADMI0EST(10)/35/2024-JD-DEPT TECH /727

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 30.07.2024

# ಹಿಂಬರಹ

ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ 6 ನೇ ವೇತನ ಶ್ರೇಣಿಯಲ್ಲಿ ರೂ.9000 ರಿಂದ ರೂ.10000 ಎಜಿಪಿ ಗೆ ಪ್ರಾಧ್ಯಾಪಕರ ಹುದ್ದೆಯಲ್ಲಿ ಮುಂಬಡ್ತಿ ನೀಡಿರುವ ಸರ್ಕಾರದ ಆದೇಶ ಸಂ: ಇಡಿ 348 ಟಿಇಸಿ 2024, ದಿ: 24.07.2024 ನ್ನು ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರ ಮುಖಾಂತರ ಸಹಾಯಕ ಪ್ರಾಧ್ಯಾಪಕರುಗಳಿಗೆ ಮಾಹಿತಿಗಾಗಿ ಹಾಗೂ ಪ್ರಾಂಶುಪಾಲರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

Signed by
Prasanna H.
Date: 03.08.2024 17:06:56

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, ಎ&ಇ, ಬೆಂಗಳೂರು.
2. ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ - ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ಸಂಬಂಧಪಟ್ಟ ಸಹ ಪ್ರಾಧ್ಯಾಪಕರುಗಳಿಗೆ (ಪ್ರಾಂಶುಪಾಲರ ಮುಖಾಂತರ).
4. ನೋಡಲ್ ಅಧಿಕಾರಿ, ಇ-ಆಡಳಿತ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಅಳವಡಿಸಲು)

ಪ್ರತಿ:-

1. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ), ಬಹುಮಹಡಿ ಕಟ್ಟಡ, ಬೆಂಗಳೂರು.
2. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಹೆಚ್ಚುವರಿ ಪ್ರತಿ ಕಡತಕ್ಕೆ

## ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:** ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ 6ನೇ ವೇತನ ಶ್ರೇಣಿಯಲ್ಲಿ ರೂ.9000 ಎಜಿಪಿ ಯಿಂದ ರೂ.10000 ಎಜಿಪಿ (ಹಂತ-4 ರಿಂದ ಹಂತ-5) ಗೆ ಪ್ರಾಧ್ಯಾಪಕರ ಹುದ್ದೆಯಲ್ಲಿ ಮುಂಬಡ್ತಿ ನೀಡುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ: ಇಡಿ 96 ಡಿಟಿಇ 2010, ದಿನಾಂಕ: 31.03.2011.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 20 ಡಿಟಿಇ 2018, ದಿನಾಂಕ: 08.12.2020.
3. ಸರ್ಕಾರದ ಪತ್ರ ಸಂಖ್ಯೆ: ಇಡಿ/186/ಡಿಟಿಇ/2020, ದಿನಾಂಕ:30.09.2021.
4. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರ ಏಕ ಕಡತ ಸಂಖ್ಯೆ: DTE-ADMI0EST(10)/35/2024.

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಸರ್ಕಾರದ ಆದೇಶದ ಆದೇಶ ಸಂಖ್ಯೆ: ಇಡಿ 96 ಡಿಟಿಇ 2010, ದಿ: 31.03.2011ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ 6ನೇ ಎಐಸಿಟಿಇ ವೇತನವನ್ನು ದಿನಾಂಕ: 01.01.2006 ರಿಂದ ಅನ್ವಯಿಸುವಂತೆ ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ/ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ ಸಿ.ಎ.ಎಸ್ ಯೋಜನೆ ಆಧಾರಿತ ವೃತ್ತಿ ಪದೋನ್ನತಿ (CAS) ಸೌಲಭ್ಯಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. All India Council for Technical Education (Career Advancement scheme for the teachers and other Academic staff in Technical Institutions) (Degree) Regulations, 2012ರ ದಿನಾಂಕ:08.11.2012ರಲ್ಲಿನ ನಿಯಮಗಳಲ್ಲಿ ವಿಧಿಸಿರುವ ಎ.ಪಿ.ಐ ಆಧಾರಿತ ಅಂಕಗಳ ಪರಿಗಣನೆಯಿಂದ ದಿನಾಂಕ:07.11.2015ರವರೆಗೆ ವಿನಾಯಿತಿ ನೀಡಿ ಕೆಲವು ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ವೃತ್ತಿ ಪದೋನ್ನತಿ (CAS) ಸೌಲಭ್ಯವನ್ನು ಮಂಜೂರು ಮಾಡಲು ಆದೇಶಿಸಲಾಗಿದೆ.

ಮೇಲೆ ಓದಲಾದ (3)ರ ಸರ್ಕಾರದ ಪತ್ರದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಸ್ಥಾನೀಕರಣ ಮುಂಬಡ್ತಿ ಮತ್ತು ಎ.ಜಿ.ಪಿ. ಮಂಜೂರು ಮಾಡುವ ಪ್ರಸ್ತಾವನೆಗಳನ್ನು ಪರಿಶೀಲಿಸಲು ಪ್ರತ್ಯೇಕ ಸ್ಥಾನೀಕರಣ ಸಮಿತಿಯನ್ನು ರಚಿಸುವ ಅಧಿಕಾರವನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ಪ್ರತ್ಯಾಯೋಜಿಸಲಾಗಿದೆ.

ಮೇಲೆ ಓದಲಾದ (4)ರ ಆಯುಕ್ತರ ಏಕಕಡತದಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ವಿಷಯ ತಜ್ಞರುಗಳನ್ನೊಳಗೊಂಡ ಸ್ಥಾನೀಕರಣ ಸಮಿತಿಯು ದಿನಾಂಕ:07.03.2024 ರಿಂದ 14.03.2024ರವರೆಗೆ ಸಭೆ ಸೇರಿ ಸರ್ಕಾರಿ ಇಂಜಿನಿಯರಿಂಗ್ 1) ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ 06 ಸಹ ಪ್ರಾಧ್ಯಾಪಕರು, 2) ಸಿವಿಲ್ ವಿಭಾಗದ 01 ಸಹ ಪ್ರಾಧ್ಯಾಪಕರು 3) ಇ&ಸಿ ವಿಭಾಗದ 02, ಸಹ ಪ್ರಾಧ್ಯಾಪಕರು, 4) ಟೆಕ್ಸ್‌ಟೈಲ್ ಟೆಕ್ನಾಲಜಿ ವಿಭಾಗದ 01 ಸಹ ಪ್ರಾಧ್ಯಾಪಕರುಗಳನ್ನೊಳಗೊಂಡಂತೆ ಒಟ್ಟು 10 ಸಹ ಪ್ರಾಧ್ಯಾಪಕರುಗಳು ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಪ್ರಾಧ್ಯಾಪಕರ ಹುದ್ದೆಗೆ ಸ್ಥಾನೀಕರಣ ಮುಂಬಡ್ತಿ ಮತ್ತು ಎ.ಜಿ.ಪಿ. ಸೌಲಭ್ಯಕ್ಕೆ ನಿಯಮಾನುಸಾರ ಅರ್ಹತೆ ಹೊಂದಿರುವ ಬಗ್ಗೆ ಪರಿಶೀಲಿಸಿ, ಸದರಿಯವರಿಗೆ ವೃತ್ತಿ ಪದೋನ್ನತಿಯನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತದೆ. ಅದರಂತೆ, ಒಟ್ಟು 10 ಸಹ ಪ್ರಾಧ್ಯಾಪಕರುಗಳಿಗೆ 6ನೇ ವೇತನ ಶ್ರೇಣಿಯಲ್ಲಿ ರೂ.9000 ಎಜಿಪಿ ಯಿಂದ ರೂ.10000 ಎಜಿಪಿಗೆ (ಹಂತ-4 ರಿಂದ ಹಂತ-5)ಕ್ಕೆ ಸದರಿಯವರುಗಳು ಮುಂಬಡ್ತಿಗೆ ಅರ್ಹತೆ ಪಡೆದ ದಿನಾಂಕದಿಂದ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಪ್ರಾಧ್ಯಾಪಕರ ಹುದ್ದೆಗೆ ಸ್ಥಾನೀಕರಣ ಮುಂಬಡ್ತಿ ಮತ್ತು ಎ.ಜಿ.ಪಿ. ಸೌಲಭ್ಯವನ್ನು ಮಂಜೂರು ಮಾಡುವಂತೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರು ಕೋರಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 10 ಸಹ ಪ್ರಾಧ್ಯಾಪಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆ (CAS) ಯಡಿ 6ನೇ ವೇತನ ಶ್ರೇಣಿಯಲ್ಲಿ ರೂ.9000 ಎಜಿಪಿ ಯಿಂದ ರೂ.10000 ಎಜಿಪಿ (ಹಂತ-4 ರಿಂದ ಹಂತ-5)ಗೆ ಪ್ರಾಧ್ಯಾಪಕರ ಹುದ್ದೆಯಲ್ಲಿ ಮುಂಬಡ್ತಿ ನೀಡಲು ಸರ್ಕಾರವು ತೀರ್ಮಾನಿಸಿದ್ದು, ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 348 ಟಿಇಸಿ 2024**

**ಬೆಂಗಳೂರು, ದಿನಾಂಕ: 24ನೇ ಜುಲೈ 2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಆದೇಶದ **ಅನುಬಂಧ** ದಲ್ಲಿರುವ ಒಟ್ಟು 10 ಸಹ ಪ್ರಾಧ್ಯಾಪಕರುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆ(CAS)ಯಡಿ 6ನೇ ವೇತನ ಶ್ರೇಣಿಯಲ್ಲಿ ರೂ.9000 ಎಜಿಪಿ ಯಿಂದ ರೂ.10000 ಎಜಿಪಿ (ಹಂತ-4 ರಿಂದ ಹಂತ-5) ಗೆ ಪ್ರಾಧ್ಯಾಪಕರ ಹುದ್ದೆಯಲ್ಲಿ ಮುಂಬಡ್ತಿ ನೀಡಿ ಆದೇಶಿಸಿದೆ.

**ಷರತ್ತುಗಳು:**

i. 2010 ಮತ್ತು 2012ರ ಎಐಸಿಟಿಇ ವೇತನ ಶ್ರೇಣಿಗಳಲ್ಲಿನ ಎ.ಪಿ.ಐ ಅಂಕಗಳ ಆಧಾರಿತ ಎ.ಜಿ.ಪಿ ಮಂಜೂರಾತಿಯು ಸರ್ಕಾರದ ಮಾರ್ಗಸೂಚಿ/ ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ.

ii. ಎ.ಜಿ.ಪಿ ಮಂಜೂರಾತಿಯು ಎಐಸಿಟಿಇ/ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ಸುತ್ತೋಲೆ/ಪತ್ರಗಳಲ್ಲಿ ನಿಗದಿಪಡಿಸುವ ಷರತ್ತು/ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

...3

iii. ಸದರಿಯವರು ಸಿಎಎಸ್‌ರಡಿ ಪದೋನ್ನತಿಗೆ ಅರ್ಹತೆ ಹೊಂದಿದ ದಿನಾಂಕದಿಂದ ಸೇವಾ ಜೇಷ್ಠತೆಯನ್ನು ಪರಿಗಣಿಸುವುದು ಹಾಗೂ ಸದರಿ ಪದೋನ್ನತಿಯ ಆರ್ಥಿಕ ಸೌಲಭ್ಯವನ್ನು ಭವಿಷ್ಯವರ್ತಿಯಾಗಿ ಅಂದರೆ, ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಜಾರಿಗೊಳಿಸುವುದು.

iv. ಅರ್ಹ ಅಧ್ಯಾಪಕರುಗಳು ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಯಾವುದೇ ತಪ್ಪು ಮಾಹಿತಿಗಳನ್ನು ಒದಗಿಸಿರುವುದು ಕಂಡು ಬಂದಲ್ಲಿ ಸಂಬಂಧಿಸಿದ ಸಹ ಪ್ರಾಧ್ಯಾಪಕರ ಎ.ಜಿ.ಪಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆ ನೀಡದೇ ಹಿಂಪಡೆಯಲಾಗುವುದು ಹಾಗೂ ತಪ್ಪು ಮಾಹಿತಿ ಒದಗಿಸಿದ ಅಧ್ಯಾಪಕರ ವಿರುದ್ಧ ಕ್ರಮ ಜರುಗಿಸಲಾಗುವುದು.

v. ಸರ್ಕಾರದ ಆದೇಶ ಸಂಖ್ಯೆ: ಇಡಿ 20 ಡಿಟಿಇ 2018, ದಿ: 08.12.2020ರ ಪತ್ರದಲ್ಲಿ ಸೂಚಿಸಿದಂತೆ ಎಪಿಐ ಆಧಾರಿತ ಅಂಕಗಳ ಪರಿಗಣನೆಯಿಂದ ದಿನಾಂಕ 07.11.2015 ರ ವರೆಗೆ ವಿನಾಯಿತಿ ನೀಡಲಾಗಿದೆ.

vi. ಸದರಿ ಬೋಧಕ ಸಿಬ್ಬಂದಿಗಳು ಸಿಎಎಸ್ ಮುಂಬಡ್ತಿಗೆ ಎಲ್ಲಾ ರೀತಿಯಲ್ಲೂ ಅರ್ಹತೆಯನ್ನು ಹೊಂದಿರುವ ಬಗ್ಗೆ ಸ್ಥಾನೀಕರಣ ಆಯ್ಕೆ ಸಮಿತಿಯು ಮಾಡಿರುವ ಶಿಫಾರಸ್ಸಿನಂತೆ ಪರಿಗಣಿಸಲಾಗಿದೆ.

vii. ಈ ಆದೇಶದನ್ವಯ ಮಂಜೂರು ಮಾಡಲಾದ ಎ.ಜಿ.ಪಿ.ಯು ಸ್ಥಳೀಯ/ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಡಿಸಿದಾಗ, ಯಾವುದೇ ಅಸಂಗತಗಳು ಕಂಡು ಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

viii. ಸಹ ಪ್ರಾಧ್ಯಾಪಕರುಗಳಿಗೆ ಪ್ರಾಧ್ಯಾಪಕರ ಎ.ಜಿ.ಪಿ ಮಂಜೂರಾತಿಯ ವಿವರಗಳನ್ನು ಸಂಬಂಧಪಟ್ಟ ನೌಕರರ ಸೇವಾ ಪುಸ್ತಕದಲ್ಲಿ ನಮೂದಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ix. ಸರ್ಕಾರವು ಹೊರಡಿಸುವ ಎ.ಜಿ.ಪಿ ಮಂಜೂರಾತಿ ಆದೇಶದ ಮೇರೆಗೆ ಪ್ರಾಂಶುಪಾಲರುಗಳು ಎಲ್ಲಾ ದಾಖಲಾತಿಗಳನ್ನು ಮತ್ತೊಮ್ಮೆ ಪರಿಶೀಲಿಸಿದ ನಂತರ ಸಹ ಪ್ರಾಧ್ಯಾಪಕರು, ಪ್ರಾಧ್ಯಾಪಕರುಗಳ ವೇತನ ನಿಗದೀಕರಣಕ್ಕಾಗಿ ಅಗತ್ಯ ಪ್ರಸ್ತಾವನೆಯನ್ನು ಮಹಾಲೇಖಪಾಲರ ಕಛೇರಿಗೆ ಕಳುಹಿಸುವ ಬಗ್ಗೆ ಕ್ರಮಕೈಗೊಳ್ಳತಕ್ಕದ್ದು.

x. ಸದರಿಯವರ ವೇತನ ಶ್ರೇಣಿಯನ್ನು 7ನೇ AICTE ಪರಿಷ್ಕೃತ ವೇತನ ಶ್ರೇಣಿಯಡಿ ಸಂವಾದಿಯಾಗಿ ನಿಗದಿಪಡಿಸಲು ನಿಯಮಾನುಸಾರ ಅಗತ್ಯ ಕ್ರಮವಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD 51 Exp-8/2023, ದಿನಾಂಕ:03.03.2023ರಲ್ಲಿ ನೀಡಿರುವ ಅಭಿಪ್ರಾಯದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

24/7/2024

**(ಮಹಾಂತಪ್ಪ ಎಸ್.ತುರಕನೂರ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ)

24/07

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಎ&ಇ), ಬೆಂಗಳೂರು.

2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಸಂಬಂಧಪಟ್ಟ ಸಹ ಪ್ರಾಧ್ಯಾಪಕರುಗಳಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರ ಕಛೇರಿಯ ಮೂಲಕ)

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

# ಅನುಬಂಧ

**(ಸರ್ಕಾರದ ಆದೇಶ ಸಂಖ್ಯೆ:ಇಡಿ 348 ಟಿಇಸಿ 2024, ದಿನಾಂಕ: 24.07.2024)**

| ಕ್ರ. ಸಂ | ಹೆಸರು, ಪದನಾಮ ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ | ಸೇವೆಗೆ ಸೇರಿದ ದಿನಾಂಕ | ಎಜಿಪಿ ರೂ.9000 ಮಂಜೂರು ಮಾಡಿದ ದಿನಾಂಕ | ಸಿ.ಎ.ಎಸ್.ರಡಿ ಎ.ಜಿ.ಪಿ. ಹಾಗೂ ಮುಂಬಡ್ತಿಗೆ ಅರ್ಹತೆ ಪಡೆದ ದಿನಾಂಕ |
|---|---|---|---|---|
| **ಮೆಕ್ಯಾನಿಕಲ್ ವಿಭಾಗ** | | | | |
| 1. | ಡಾ. ಅರುಣ್ ಕೆ.ವಿ. | 14.10.2010 | 14.10.2013 | 14.10.2016 |
| 2. | ಡಾ. ಲಕ್ಷ್ಮೀದೇವಮ್ಮ ಎಂ.ಎಂ. | 06.10.2010 | 27.11.2014 | 27.11.2017 |
| 3. | ಡಾ. ಮಹೇಂದ್ರುಮಣಿ ಜಿ. | 15.10.2010 | 14.05.2014 | 14.05.2017 |
| 4. | ಡಾ. ಸೀನಪ್ಪ | 04.10.2010 | 04.10.2013 | 04.10.2016 |
| 5. | ಡಾ. ರಾಜಣ್ಣ ಎಸ್. | 04.10.2010 | 04.10.2013 | 04.10.2016 |
| 6. | ಡಾ. ಮುನಿರಾಜು ಎಂ. | 11.10.2010 | 11.10.2013 | 11.10.2016 |
| **ಸಿವಿಲ್ ಇಂಜಿನಿಯರಿಂಗ್ ವಿಭಾಗ** | | | | |
| 7. | ಡಾ. ಶಾಂತಲಾ ಬಿ. | 30.12.2010 | 30.12.2013 | 30.12.2016 |
| **ಇ & ಸಿ ಇಂಜಿನಿಯರಿಂಗ್ ವಿಭಾಗ** | | | | |
| 8. | ಡಾ. ರಂಗರಾಜು ಹೆಚ್.ಜಿ. | 11.10.2010 | 06.11.2014 | 06.11.2017 |
| 9. | ಡಾ. ಪರಮೇಶ್ | 11.10.2010 | 11.10.2013 | 11.10.2016 |
| **ಟೆಕ್ಸ್‌ಟೈಲ್ ಟೆಕ್ನಾಲಜಿ ವಿಭಾಗ** | | | | |
| 10. | ಡಾ. ಹನುಮಂತನಾಯ್ಕ ಹೆಚ್.ಎಸ್. | 28.05.1992 | 22.03.2012 | 22.10.2018 |

24/7/2024

**(ಮಹಾಂತಪ್ಪ ಎಸ್.ತುರಕನೂರ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ)

24/07